ಶ್ರೀ

ಶ್ರೀ ತಂದೆ ಮುದ್ದುಮೋಹನ ವಿಠಲಾತ್ಮಕ ಶ್ರೀ ಗುರುಗೋವಿಂದ ವಿಠಲೋ ವಿಜಯತೇ

ಶ್ರೀ ಗುರುಭ್ಯೋನಮಃ ಹರಿಃ ಓಂ

# 34ನೇ ಅಖಿಲ ಭಾರತ ಹರಿದಾಸ ಸಮ್ಮೇಳನ

# ಮತ್ತು

# ಶ್ರೀ ಪುರಂದರದಾಸರ ಆರಾಧನಾ ಮಹೋತ್ಸವ

# ಆಹ್ವಾನ ಪತ್ರಿಕಾ

ದಿನಾಂಕ **31-1-2011** ರಿಂದ **3-2-2011**

ಪುಷ್ಯ ಬಹುಳ ತ್ರಯೋದಶಿ ಮಾಘ ಶುದ್ಧ ಪ್ರತಿಪದಾ

ಸೋಮವಾರದಿಂದ ಗುರುವಾರದವರೆಗೆ



**ಸ್ಥಳ : ಶ್ರೀ ಪುರಂದರಾಶ್ರಮ**

ಆದವಾನಿ-ಮಂತ್ರಾಲಯ ರಾಷ್ಟ್ರ ಹೆದ್ದಾರಿ (ವಯಾ ಮಾಧವರಂ)

ಓಂ ನಗರ್ ಬಸ್ ಸ್ಟಾಪ್ ಹತ್ತಿರ, ಓಂ ನಗರ್ ಪೋಸ್ಟ್ - 518349

ಆದವಾನಿ ತಾಲ್ಲೂಕು, ಕರ್ನೂಲ್ ಜಿಲ್ಲೆ, ಆಂಧ್ರಪ್ರದೇಶ

ದೂರವಾಣಿ : +91-08512- 201073

Mob. : 09394017134, 09392227850

# ಅಖಿಲ ಭಾರತ ಹರಿದಾಸ ಸಮ್ಮೇಳನ ಟ್ರಸ್ಟ್(ರಿ.)

ಬೆಂಗಳೂರು

ಭಗವದ್ಭಕ್ತರಲ್ಲಿ ವಿಜ್ಞಾಪನೆ

ಕೀರ್ತಿಶೇಷ ಮೈಸೂರಿನ ಶ್ರೀ ಗುರುಗೋವಿಂದ ವಿಠಲದಾಸರಿಂದ ಪ್ರವರ್ತಿತವಾದ ಮೇಲ್ಕಂಡ ಟ್ರಸ್ಟಿನವರು ಪ್ರತಿ ವರ್ಷ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಹರಿದಾಸ ಸಮ್ಮೇಳನ ಮತ್ತು ಶ್ರೀ ಪುರಂದರದಾಸರ ಆರಾಧನೆ ನಡೆಸುತ್ತಾ ಜ್ಞಾನ ಪ್ರಸಾರ ಮಾಡುತ್ತಿರುವುದು ತಮಗೆ ತಿಳಿದ ವಿಷಯವೇ ಆಗಿದೆ. ಅನೇಕ ಭಕ್ತರು ಪ್ರತಿಬಾರಿಯೂ ಆಯಾ ಸ್ಥಳಗಳಲ್ಲಿ ಆಗಮಿಸಿ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇವೆ.

ಪ್ರಕೃತ 2011ನೇ ವರ್ಷದಲ್ಲಿ ನಡೆಯಲಿರುವ ಆರಾಧನೋತ್ಸವ ಮತ್ತು ದಾಸ ಸಮ್ಮೇಳನ ಒಂದು ವೈಶಿಷ್ಟ್ಯ ಪೂರ್ಣವಾಗಿ ನೆರವೇರಲಿದೆ.

ಪುರಂದರಾಶ್ರಮ ಪರಿಚಯ : ಮುಮುಕ್ಷುಗಳಿಗೆ ಆತ್ಮೋದ್ಧಾರದ ಹಾದಿ ತೋರಿಸುವ ಸದುದ್ದೇಶದಿಂದ ಈ ಹರಿದಾಸ ಆಧ್ಯಾತ್ಮಿಕ ಸಾಧನೆ ಕೇಂದ್ರ ನಿರ್ಮಾಣವಾಗಿದೆ. ಶ್ರೀ ವಿಜಯದಾಸರ ಅವಿಚ್ಛಿನ್ನ ಪರಂಪರೆಯಲ್ಲಿ ಬಂದ ಕೀ.ಶೇ. ಶ್ರೀ ಗುರುಗೋವಿಂದ ವಿಠಲದಾಸರ ಶಿಷ್ಯರಾದ ಶ್ರೀ ಹರಿನಾರಾಯಣ ವಿಠಲದಾಸರು ಶ್ರೀ ಹರಿಗುರುಗಳಿಂದ ಪ್ರೇರಿತರಾಗಿ ತಮ್ಮ ಅಂತರಂಗದ ಬಯಕೆಯನ್ನು ಕಾರ್ಯರೂಪಕ್ಕಿಳಿಸಿದ್ದಾರೆ.

ಶ್ರೀ ಕ್ಷೇತ್ರ ಮಂತ್ರಾಲಯದ ಸನಿಹದಲ್ಲಿ 11½ ಎಕರೆಗಳ ಸವಿಸ್ತಾರ ನೈಸರ್ಗಿಕ ಪರಿಶುದ್ಧ ಹಾಗೂ ಪವಿತ್ರ ವಾತಾವರಣ ಯುಕ್ತ ಪ್ರದೇಶದಲ್ಲಿರುವ ಈ ಆಶ್ರಮದ ಸುತ್ತು - ಮುತ್ತು ಸುಮಾರು 30 ಕಿ.ಮೀ. ಅಂತರದಲ್ಲಿ ಹನ್ನೆರಡಕ್ಕೂ ಮೇಲ್ಪಟ್ಟು ಅವಶ್ಯ ಸಂದರ್ಶನೀಯ ವೈಷ್ಣವ ಕ್ಷೇತ್ರಗಳಿರುವುದು ಒಂದು ವಿಶಿಷ್ಟತೆಯೇ ಸರಿ. 2005ರಲ್ಲಿ ನಡೆದಾಡುವ ರಾಯರು ಎಂದೇ ಪ್ರಸಿದ್ಧರಾಗಿದ್ದ ಶ್ರೀ ಶ್ರೀ 1008 ಶ್ರೀ ಸುಶಮೀಂದ್ರ ತೀರ್ಥರ ಅಮೃತಹಸ್ತದಿಂದ ಶಂಕುಸ್ಥಾಪನೆ ನಡೆಯಿತು. ಅದೇ

ವರ್ಷದಲ್ಲಿ ಭಾವೀಸಮೀರ ಶ್ರೀ ವಾದಿರಾಜ ಪೂಜ್ಯ ಶ್ರೀ ಮಚ್ಚರಣರ ಭವ್ಯ ಪರಂಪರೆಯಲ್ಲಿ ವಿರಾಜಿಸಿದ ತಪೋ ಮೂರ್ತಿ ಶ್ರೀ ಶ್ರೀ 1008 ಶ್ರೀ ವಿಶ್ವೋತ್ತಮ ತೀರ್ಥರ ಆಗಮನ ಮತ್ತು ಅನುಗ್ರಹ ಪುರಸ್ಸರ ಆಶೀರ್ವಾದ ಪ್ರಾಪ್ತಿ.

ಇಂತಹ ಸದುದ್ದೇಶದಿಂದ ನಿರ್ಮಾಣಗೊಂಡಿರುವ ಈ ಸುಕ್ಷೇತ್ರದಲ್ಲಿ ಈಗ ತಮ್ಮ ದಿವ್ಯ ಸನ್ನಿಧಿಯಿಂದ ಅನುಗ್ರಹಿಸುತ್ತಿರುವವರು ಭೂವೈಕುಂಠಪತಿ ಶ್ರೀ ಪ್ರಸನ್ನ ಶ್ರೀನಿವಾಸ, ಚಕ್ರಧರ ಶ್ರೀಮನ್ನಾರಾಯಣ, ಶ್ರೀ ಉಡುಪಿ ಕೃಷ್ಣ, ಶ್ರೀ ಪಾಂಡುರಂಗ ವಿಠಲ, ಅವತಾರ ತ್ರಯೋಪೇತ ಶ್ರೀ ಮುಖ್ಯಪ್ರಾಣ ದೇವರು ಶ್ರೀ ರಾಘವೇಂದ್ರಸ್ವಾಮಿಗಳ ಮೃತ್ತಿಕಾ ಬೃಂದಾವನ ಮತ್ತು ಶ್ರೀ ಪುರಂದರ ದಾಸರು.

ಹರಿದಾಸ ಪರಂಪರೆಗೆ ಶ್ರೀ ಗುರುಗೋವಿಂದ ವಿಠಲ ದಾಸರ ಶಿಷ್ಯರು ಮಾಡಿರುವ ಸೇವೆಯಲ್ಲಿ ಮುಕುಟಪ್ರಾಯವಾಗಿ ಸಲ್ಲಿಸಲಾಗಿರುವ ಈ ಸೇವೆ ನಿಜವಾಗಿ ಆದರ್ಶನೀಯವಾಗಿದೆ. ವಾನಪ್ರಸ್ಥಾಶ್ರಮದ ಜೀವನಕ್ಕೆ ದಿಗ್ದರ್ಶನ ಮಾಡುವಂತಹ ಯೋಜನೆಗಳನ್ನು ಶ್ರೀ ಹರಿನಾರಾಯಣದಾಸರು ಇಲ್ಲಿ ಕಾರ್ಯಗತಗೊಳಿಸಲಿದ್ದಾರೆ. ಕೇವಲ ಆರಾಧನಾ ಕಾಲವಲ್ಲದೆ ಇತರ ದಿನಗಳಲ್ಲಿಯೂ ಇಲ್ಲಿಗೆ ಬಂದು ಕೆಲಕಾಲ ವಾಸ ಮಾಡಿ ಯಾಂತ್ರಿಕ ಜೀವನದ ಕಲುಷಿತವಾತಾವರಣ ದೂರರಾಗಿ ಮನಃಶಾಂತಿಯನ್ನು ಪಡೆಯಲು ತತ್ವಾಭಿಮಾನಿ ದೇವತೆಗಳು ಒಲಿದು ನಿರ್ಮಿಸಿರುವ ಶಾಂತಿಧಾಮ - ಪುರಂದರಾಶ್ರಮ. ಭಕ್ತ ವೃಂದಕ್ಕೆ ಸದಾ ಸುಸ್ವಾಗತ.

ಬನ್ನಿ ಬನ್ನಿ ಅವಶ್ಯ ಬನ್ನಿ, ಬಂಧುಮಿತ್ರ ಪರಿವಾರದೊಂದಿಗೆ ಅಧಿಕ ಸಂಖ್ಯೆಯಲ್ಲಿ ಬಂದು ಮಹೋತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಿಮ್ಮ ಪಾಲಿನ ಸೇವೆ ಸಲ್ಲಿಸಿ ಶ್ರೀ ಹರಿವಾಯುಗುರುಗಳ ವಿಶೇಷಾನುಗ್ರಹಕ್ಕೆ ಪಾತ್ರರಾಗಿರಿ.

ಇತಿ ಅಖಿಲ ಭಾರತ ಹರಿದಾಸ ಸಮ್ಮೇಳನದ ಟ್ರಸ್ಟ್‌ಪರವಾಗಿ
ಖಗವರಧ್ವಜ ವಿಠಲದಾಸರು
ಕಾರ್ಯದರ್ಶಿಗಳು

ಆರಾಧನಾ ಕಾರ್ಯಕ್ರಮಗಳ ವಿವರಗಳನ್ನೊಳಗೊಂಡ ಪತ್ರಿಕೆ ಕೆಲವೇ ದಿವಸಗಳಲ್ಲಿ ಕಳಿಸಲಾಗುವುದು.

ಸೂ. 1. ಸೇವಾ ಕಾಣಿಕೆಗಳನ್ನು ಕಳಿಸಲಪೇಕ್ಷಿಸುವ ಭಕ್ತರು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಅಧಿಕೃತ ರಸೀದಿ ಪಡೆಯಲು ವಿಜ್ಞಾಪನೆ

**Address :** **Sri Purandara Vittala Seva Trust**
**Om Nagar P.O. Pin Code : 518349**
**Adoni Taluk, Kurnool District, A. P.**

**Cheques / D.D.'s / Mo's should be made in favour of**
**Sri Purandara Vittalaseva Trust**
**C/A No. 1713 IFSC Code 0000601 CNRB**
**Canara Bank Adoni Branch**

2. ಬೆಂಗಳೂರು ಕಡೆಯಿಂದ ರೈಲುಗಾಡಿ (Train) ದ್ವಾರಾ ಬರುವವರು ಆದೋನಿ ಸ್ಟೇಷನ್‌ನಲ್ಲಿ ಇಳಿದು ಅಲ್ಲಿಂದ ಬಸ್ / ವ್ಯಾನ್ / ಆಟೋ ದ್ವಾರಾ ಶ್ರೀ ಪುರಂದರಾಶ್ರಮ ತಲುಪಬಹುದು. (ಆದವಾನಿಯಿಂದ ಶ್ರೀ ಪುರಂದರಾಶ್ರಮ - 25 ಕಿ.ಮೀ.)

3. ಮೈಸೂರು ಹಾಗೂ ಬೆಂಗಳೂರು ಕಡೆಯಿಂದ ಬರುವವರು ಮಾಧವರ ಅಥವಾ ಮಂತ್ರಾಲಯಕ್ಕೆ ಟಿಕೆಟ್ ತೆಗೆಯಿಸಿ ಶ್ರೀ ಪುರಂದರಾಶ್ರಮದಲ್ಲಿ ಇಳಿಯಬಹುದು.